ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು 3 ಲಕ್ಷ ಹಣವನ್ನು ಪಡೆದುಕೊಂಡು ತಾಯಮ್ಮ ಮತ್ತು ಮುನಿತಿಮ್ಮಯ್ಯ ಪ್ರತ್ಯೇಕವಾಗಿ ಹಣ ಪಡೆದುಕೊಂಡು ಸಹಿ ಮಾಡಿರುತ್ತಾರೆ ಎಂದು ಬರೆಯಾಲಗಿದ್ದು ಈ ವಿಚಾರಗಳು ಕರಾರು ಪತ್ರದಲ್ಲಿ ಒಕ್ಕಣೆ ಇದೆಯಾ ಎಂದರೆ ಸಾಕ್ಷಿ ಆ ರಿತೀ ಒಕ್ಕಣೆ ಇಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ಪ್ರಮಾಣ ಪತ್ರವದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಹಣ ತೆಗೆದುಕೊಂಡು ಆ 3 ಜನರು ಹಂಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 02.12.2006ರಂದು ಪ್ರತಿವಾದಿಗಳು 4 ಲಕ್ಷ ಹಣ ಪಡೆದುಕೊಂಡಿದ್ದಾರೆ ಎಂದುಹೇಳಿದ್ದೀರಾ ಆ ದಿನ ನೀವು ಇದ್ದೀರಾ ಎಂದರೆ ಸಾಕ್ಷಿ ಹೌದು ಇದ್ದೆ ಎಂದು ನುಡಿಯುತ್ತಾರೆ. ಆ ದಿನ ಚೋಳೂರಯ್ಯ ಮತ್ತು ಮಗ ಬಂದಿದ್ದರು. ಇವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ. 4 ಲಕ್ಷ ಹಣ ಪಡೆದ ಸಂದರ್ಭದಲ್ಲಿ ನೀವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಬಹಳ ದಿನವಾಗಿದೆ ದಾಖಲೆ ನೋಡಬೇಕು ಎಂದು ನುಡಿಯುತ್ತಾರೆ. ದಿನಾಂಕ 02.12.2006ರಂದು 4 ಲಕ್ಷ ಹಣವನ್ನು ಹೂರತುಪಡಿಸಿ ಬೇರೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಗಳಿಗೆ ಹಣವನ್ನು ಹೊರತುಪಡಿಸಿ ಬೇರೆ ಯಾರಿಗೂ ಹಣ ಕೊಟ್ಟಿಲ್ಲ ಎಂದರೆ ಸಾಕ್ಷಿ ಮುನಿತಿಮ್ಮಯ್ಯನವರು ಅವರ ಜೊತೆ ಬರುತ್ತಿದ್ದರು ಅವರು ಹಣ ಪಡೆದುಕೊಂಡು ಹಂಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮುನಿತಿಮ್ಮಯ್ಯ ಮತ್ತು ಪ್ರತಿವಾದಿಗಳನ್ನು ಸೇರಿಸಿ ಆ ದಿನ 4 ಲಕ್ಷ ಹಣ ಕೊಡಲಾಗಿದೆ ಎಂದರೆ ಸರಿ.

ನಿಪಿ-1ರ 10ನೇ ಪುಟದ ಹಿಂಭಾಗ ದಿನಾಂಕ 02.12.2006ರಂದು 10 ಲಕ್ಷ ಪಡೆದಿದ್ದಾರೆ ಎಂದು ಷರಾ ಬರೆಯಲಾಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಹಿಂಬರಹದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನನಗೆ ಎಷ್ಟು ಹಣ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ ಮತ್ತು ವಾದಿಗಳ ಮಾತು ಕೇಳಿ ಪ್ರತಿವಾದಿಗಳು4 ಲಕ್ಷ ಹಣಪಡೆದುಕೊಂಡಿರತ್ತಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಷರಾವನ್ನು ವಾದಿಗಳ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಪ್ರತಿವಾದಿಗಳ ಜೊತೆ ಸೇರಿ ಸಂಚು ಮಾಡಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಸದರಿ ಹಣಕಾಸಿನ ವ್ಯವಹಾರದ ಬಗ್ಗೆ ಏನೂ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 4 ಲಕ್ಷ ಹಣ ಪಡೆಯಲು ಯಾವ ಅವಶ್ಯಕತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಗೆ ದಾರಿ ಮಾಡುವ ಉದ್ದೇಶದಿಂದ 4 ಲಕ್ಷ ಹಣ ಪಡೆದುಕೊಂಡಿರುತ್ತಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ರಸ್ತೆ ಮಾಡವ ಉದ್ದೇಶದಿಂದ ಹಣ ಪಡೆದುಕೊಂಡಿರುತ್ತಾರೆ ಎಂದರೆ ಷರಾದಲ್ಲಿ ಒಕ್ಕಣೆ ಇಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಹಣವನ್ನು ಮುನಿತಿಮ್ಮಯ್ಯನವರಿಗೆ ಕೊಟ್ಟಿರುತ್ತೇವೆ. ಚೋಳರೂಯ್ಯನವರ ಮಗನ ಸಹಿಯನ್ನು ಷರಾಗೆ ಪಡೆದುಕೊಂಡಿಲ್ಲ. ಬಹಳ ವರ್ಷಗಳಾಗಿರುವ ಕಾರಣ ಆ ದಿನ ಬಂದಂತಹ ಸಾಕ್ಷಿದಾರರ ಹೆಸರು ನೆನಪಿಲ್ಲ. ಆ ದಿನ ಯಾವುದೇ ಸಾಕ್ಷಿದಾರರ ಬಂದಿರಲಿಲ್ಲ ಸಾಕ್ಷಿದಾರರ ಸಹಿಗಳನ್ನು ಪತ್ರದಲ್ಲಿ ಸೃಷ್ಟಿಸಲಾಗಿದೆ ಎಂದರ ಸರಿಯಲ್ಲ.

ನನ್ನ ಪ್ರಮಾಣ ಪತ್ರದ 6ನೇ ಪ್ಯಾರಾದಲ್ಲಿ ದಿನಾಂಕ 27.12.2007ರಂದು

ಪ್ರತಿವಾದಿಗಳು 3 ಲಕ್ಷ ಹಣವನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದ್ದೀರಾ ಅದರ ಬಗ್ಗೆ ಷರಾ ತೋರಿಸಿ ಎಂದು ಕೇಳಿದಾ ಸಾಕ್ಷಿಯು ನಿಪಿ-1ರಲ್ಲಿ 14ನೇ ಪುಟದ ಹಿಂಬದಿಯಲ್ಲಿ ಷರಾ ಇದೆ ಎಂದು ತೋರಿಸುತ್ತಾರೆ. ಸದರಿ ಷರಾವು ದಿನಾಂಕ 27.12.2010ರ ಷರಾ ಎಂದರೆ ಸಾಕ್ಷಿ ಇಸವಿಯನ್ನು ಮಿಸ್ಟೇಕ್ ಆಗಿ ಬರೆಯಾಲಗಿದೆ ಎಂದು ನುಡಿಯುತ್ತಾರೆ. ಅದರಲ್ಲಿ ಷರಾದಲ್ಲಿ 1 ಲಕ್ಷದ 37 ಸಾವಿರ ಎಂದ ಬರೆಯಲಾಗಿದೆ. ನಾನು ಹೇಳಿದಂತೆ ದಿನಾಂಕ 27.12.2007ರಂದು ಯಾವುದೇ ಷರಾ ಬರೆದಿಲ್ಲ ಎಂದರೆ ಸಾಕ್ಷಿ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ-1ರ ದಾಖಲೆಯನ್ನು ನೋಡಿ ಆ ರೀತಿ ಷರಾ ಇಲ್ಲ ಎಂದು ನುಡಿಯುತ್ತಾರೆ. ನಾನೇ ಪತ್ರ ಬರೆದಿದ್ದೇನೆ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಮತ್ತು ಷರಾ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 27.12.2010ರಂದು 1 ಲಕ್ಷದ 37 ಸಾವಿರ ಹಣವನ್ನು ಪ್ರತಿವಾದಿಗಳು ಪಡೆದುಕೊಂಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಹಿಂಬರಹದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ರಸ್ತೆ ಮತ್ತು ರೆವಿನ್ಯೂ ಸ್ಕೆಚ್ ಮಾಡಿಸುವ ಉದ್ದೇಶದಿಂದ ದಿನಾಂಕ 28.02.2011ರಂದು ಹಣ ಪಡೆದುಕೊಂಡಿರುತ್ತಾರೆ.

ಈ ಹಂತದಲ್ಲಿ ಬೆಳಗಿನ ನ್ಯಾಯಾಲಯದ ಸಮಯ ಮುಕ್ತಾಯವಾಗಿರುವ ಕಾರಣ ಮುದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.